ನಾವು ಎಂ.ಎ. ಓದುವಾಗ ಸಿ.ಡಿ. ನರಸಿಂಹಯ್ಯನವರು ಇಂಗ್ಲಿಷ್ ವಿಭಾಗದ ಮುಖ್ಯಸ್ಥರು. ಗೋವಿಂದ ರಾವ್, ಎಂ.ಎನ್. ರಾಮಸ್ವಾಮಿ ಇವರೆಲ್ಲ ಪಾಠ ಮಾಡುತ್ತಿದ್ದರು. ತಮ್ಮ ವೃತ್ತಿಯನ್ನು ಬಹಳ ಪ್ರೀತಿಸುತ್ತಿದ್ದವರು. ಅವರ ಪಾಠದಲ್ಲಿ ಶ್ರದ್ಧೆ ಎದ್ದು ಕಾಣುತ್ತಿತ್ತು. ಮೇಷ್ಟ್ರು ವಿದ್ಯಾರ್ಥಿಗಳ ನಡುವೆ ಬಹಳ ಆತ್ಮೀಯವಾದ ಸಂಬಂಧವಿತ್ತು. ತರಗತಿಯಲ್ಲಿ ಸುಮಾರು ಹನ್ನೆರಡು ಜನ ಇದ್ದೆವು. ಮೇಷ್ಟ್ರ ಸುತ್ತಲೂ ಕೂತು ಪಾಠ ಕೇಳುತ್ತಿದ್ದೆವು. ಪ್ರಶ್ನೆ ಕೇಳುತ್ತಿದ್ದೆವು, ಚರ್ಚೆಗಳು ನಡೆಯುತ್ತಿದ್ದವು. ಯು.ಆರ್. ಅನಂತಮೂರ್ತಿ ನನ್ನ ಸಹಪಾಠಿಯಾಗಿದ್ದರು.

ಎಂ.ಎ.ನಲ್ಲಿ Literary club 'ಸಹೃದಯ ಬಳಗ' ಅಂತ ಮಾಡಿಕೊಂಡಿದ್ದೆವು. ಅದಕ್ಕೊಂದು ಸಲ ಸೆಕ್ರೆಟರಿಯಾಗಿ ಕೂಡ ಕೆಲಸ ಮಾಡಿದ್ದೆ. ಪ್ರತಿ ತಿಂಗಳು ಒಂದು ವಿಷಯದ ಕುರಿತು ಯಾರಾದರೊಬ್ಬರು ಮಾತಾಡಬೇಕಿತ್ತು. ಆ ಚರ್ಚೆಗಳು ತುಂಬ ಚೆನ್ನಾಗಿರೋವು.

## ರಾಮಚಂದ್ರ ಶರ್ಮ ಅವರ ಭೇಟಿ, ಸಾಂಗತ್ಯ... ನೆನಪುಗಳು

ನನ್ನ ಚಿಕ್ಕಮ್ಮನ ಮಗನಿಗೆ ಇವರು ಸ್ನೇಹಿತರು. ಬೆಂಗಳೂರಿನಲ್ಲಿ ನಡೆದ ಅವನ ಮದುವೆಗೆ ಮೈಸೂರಿಂದ ಬಂದಿದ್ದೆವು. ಆ ಮದುವೆಗೆ ಇವರು ಕೂಡ ಬಂದಿದ್ದರು. ಮದುವೆ ಮನೆಯಲ್ಲಿ ಮಕ್ಕಳೊಂದಿಗೆ ಕಂಬದಾಟ ಆಡುತ್ತಿದ್ದ ನನ್ನ ನೋಡಿ ನನ್ನಕ್ಕನ ಹತ್ತಿರ, 'ಆ ಹುಡುಗಿ ಯಾರು, ನಿಮಗೆ ಗೊತ್ತೇ?' ಎಂದು ಕೇಳಿದ್ದರಂತೆ. ಮದುವೆ ಮುಗಿಸಿ ಮೈಸೂರಿಗೆ ಹೋಗಲು ಬಸ್ ಹತ್ತಿ ಕೂತಿದ್ದಾಗ ಕಿಟಕಿಯ ಹತ್ತಿರ ಬಂದು ತಮ್ಮ 'ಏಳು ಸುತ್ತಿನ ಕೋಟೆ' ಕವನ ಸಂಕಲನ ಕೊಟ್ಟು, 'ಹೇಗಿದೆ ಓದಿ ಹೇಳಿ' ಅಂದರು. ನಾನು, 'ಹೂಂ' ಅಂತ ತಲೆಯಾಡಿಸಿ ಪುಸ್ತಕ ತೆಗೆದುಕೊಂಡೆ. ಹೀಗೆ ಪರಿಚಯ ಮೊದಲಾಯಿತು. ಸ್ನೇಹ ಬೆಳೆದು ಮದುವೆಯಾಯಿತು. ಆಗ ನನಗೆ ಹತ್ತೊಂಬತ್ತು ವರ್ಷ.

ನಮ್ಮ ಮನೆಯಲ್ಲಿ ಗಂಡು ತೋರಿಸು, ಹೆಣ್ಣು ತೋರಿಸು ಈ ತರಹದ ಯಾವುದೂ ಇರಲಿಲ್ಲ. ಪರಸ್ಪರರ ಒಪ್ಪಿಗೆಗೆ ಮನೆಯವರು ಸಮ್ಮತಿಸಿದರು. ಮನಸಾರೆ ಒಪ್ಪಿ ಪಡೆದ ಸಂಬಂಧವಾದ್ದರಿಂದ ಜೀವನಕ್ಕೊಂದು ಅರ್ಥ ಬಂದಿತು. **It was a life lived together in a real sense of the word.**

ಅವರು ತುಂಬು ಜೀವನಪ್ರೀತಿಯ ಲವಲವಿಕೆಯ ಮನುಷ್ಯ. ಅದ್ಭುತವಾದ ಹಾಸ್ಯಪ್ರಜ್ಞೆ. ಎಲ್ಲ ಮುಗಿದುಹೋಯಿತು ಎನ್ನುವ ರೀತಿ ಗೋಳಾಡಿದವರೇ ಅಲ್ಲ, ಮಾಡುವ ಕೆಲಸದಲ್ಲಿ ಸ್ವಾತಂತ್ರ್ಯ ಕೊಡುತ್ತಿದ್ದರು. ಯಾವುದೇ ಕೆಲಸ ಕೈಗೆತ್ತಿಕೊಂಡರೂ ಮನಃಪೂರ್ವಕವಾಗಿ ಮಾಡುತ್ತಿದ್ದರು. ಸಂಬಂಧಗಳಿಗೆ ಬಹಳ ಬೆಲೆ ಕೊಡುತ್ತಿದ್ದರು. ಎಂದೂ ಮನನೋಯಿಸುವಂತೆ ನಡೆದುಕೊಳ್ಳುತ್ತಿರಲಿಲ್ಲ. ಬೇರೆಯವರನ್ನು ಅರ್ಥಮಾಡಿಕೊಂಡು ನಡೆಯುತ್ತಿದ್ದರು. ಎಲ್ಲಕ್ಕಿಂತ ಹೆಚ್ಚಿಗೆ ಒಳ್ಳೆಯ ಸ್ನೇಹಿತರಾಗಿದ್ದರು. ಜಗಳವಾಡಿದ ನೆನಪೇ ಇಲ್ಲ.

ಆಗ ಅವರು ಬೆಂಗಳೂರು ಹೈಸ್ಕೂಲಿನಲ್ಲಿ ಕೆಲಸ ಮಾಡುತ್ತಿದ್ದರು. ಮದುವೆಯ ಅನಂತರ ಬೆಂಗಳೂರಿಗೆ ಬಂದೆ. ಆಮೇಲೆ ಅವರಿಗೆ ಬೇರೆ ದೇಶದಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಾಗ ಅಲ್ಲಿಗೆ ಹೋದೆವು. ಸುಮಾರು ವರ್ಷ ಅಲ್ಲಿಯೇ ಕಳೆದವು. ಅಲ್ಲೇ ನಾನೂ ಶಿಕ್ಷಕಿಯಾಗಿ ಕೆಲಸ ಮಾಡಲು ಶುರುಮಾಡಿದೆ. ಹೋದ ದೇಶಗಳಲ್ಲಿನ ವಾತಾವರಣ, ಜನ ಎಲ್ಲವೂ ಒಳ್ಳೆಯ ಅನುಭವ ಕೊಟ್ಟವು.

## ಬೆಂಗಳೂರಿನಲ್ಲಿ...

ಎಷ್ಟೇ ದೇಶಗಳನ್ನೂ ಸುತ್ತಿದರೂ ನಮ್ಮ ಊರಿನ ಸೆಳೆತ ನಮಗೆ ಇದ್ದೇ ಇರುತ್ತದೆ ಅಲ್ಲವೆ? ಹುಟ್ಟೆಲ್ಲೊ ಅಲ್ಲೆ ಸಾಯುವುದೆ ಸ್ವರ್ಗ ಅಂತ ಅವರು (ರಾಮಚಂದ್ರ ಶರ್ಮ) ಕವನವೊಂದರಲ್ಲಿ